MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 22-4-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಜೋಳ ದರ ಹೆಚ್ಚಳ, 2022–23 ರಲ್ಲಿ ಜಾಗತಿಕ ಜೋಳ ಉತ್ಪಾದನೆ 13 ಮಿಲಿಯನ್ ಟನ್ ಇಳಿಕೆ

ಕರ್ನಾಟಕದ ಬೆಳಗಾವಿ, ಒರಿಸ್ಸಾದ ಪೂರ್ನಿಯಾ ಮಾರುಕಟ್ಟೆಗಳಲ್ಲಿ ಸಗಟು ಬೇಡಿಕೆ ಹೆಚ್ಚಳದಿಂದ ಜೋಳ ದರ ಹೆಚ್ಚಳವಾಗಿದೆ. 2022–23 ನೇ ಸೀಜನ್‌ನಲ್ಲಿ ಉಕ್ರೈನ್ ಹಾಗೂ ಯು.ಎಸ್ ಗಳಲ್ಲಿ ಬೇಸಿಗೆ ಬೆಳೆಯ ಉತ್ಪಾದನೆ ಇಳಿಕೆಯಿಂದ ಜಾಗತಿಕ ಜೋಳ ಉತ್ಪಾದನೆ 13 ಮಿಲಿಯನ್ ಟನ್ ಇಳಿಕೆಯಾಗಬಹುದೆಂದು IGC (INTERNATIONAL GRAINS COUNCIL) ಹೇಳಿದೆ.

## ಮಲೇಶಿಯನ್ ಪಾಮೆಣ್ಣೆ ದಾಸ್ತಾನು ಹೆಚ್ಚಳ, ಎಪ್ರಿಲ್ 1–20 ರಫ್ತು ಇಳಿಕೆ

ಮಲೇಶಿಯನ್ ಪಾಮೆಣ್ಣೆ ಉತ್ಪಾದನೆ ಹೆಚ್ಚಳ, ಎಪ್ರಿಲ್ 1–20 ಅವಧಿ ರಫ್ತು 12.6 ಶೇಕಡಾ ಇಳಿಕೆಯಾಗಿ 632,588 ಆಗಿದ್ದು, ಇದರಿಂದ ಈ ವಾರ ಪ್ರಥಮ ಬಾರಿ ಪಾಮೆಣ್ಣೆ ದರ ಇಳಿಕೆಯಾಗಿದೆ.

## ಭಾರತದಿಂದ ರಷ್ಯಾಕ್ಕೆ ಅಕ್ಕಿ, ಚಹಾ, ಕಾಫಿ, ಹಣ್ಣುಗಳ ರಫ್ತು ಆರಂಭ

ಸಂಘರ್ಷದ (ಯುಕ್ರೈನ್, ರಷ್ಯಾ) ವೇಳೆ ಸ್ಥಗಿತಗೊಂಡಿದ್ದ ಆಹಾರ ಸಾಮಾಗ್ರಿಗಳ ರಫ್ತು ಭಾರತದಿಂದ ರಷ್ಯಾಕ್ಕೆ ಆರಂಭವಾಗಿದೆ. ಚಹಾ, ಕಾಫಿ, ಅಕ್ಕಿ, ಹಣ್ಣುಗಳ ರಫ್ತು ಇದರಲ್ಲೊಳಗೊಂಡಿದೆ. ಪಾಶ್ಚಾತ್ಯ ದೇಶಗಳು ಯುರೋಪ್ ರಷ್ಯಾಕ್ಕೆ ರಫ್ತು ನಿರ್ಬಂಧ ವಿಧಿಸಿರುವುದರಿಂದಾಗಿ, ಭಾರತದಿಂದ ಮತ್ತೆ ರಫ್ತು ಪ್ರಾರಂಭವಾಗಿದೆಯೆನ್ನಲಾಗಿದೆ.

## ಭಾರತದಿಂದ ಎಣ್ಣೆ ಹಿಂಡಿಗಳ ರಫ್ತು 2021–22 ರಲ್ಲಿ 37 ಶೇಕಡಾ ಇಳಿಕೆ

2021–22 ರಲ್ಲಿ ಭಾರತದಿಂದ ಎಣ್ಣೆ ಹಿಂಡಿಗಳ ರಫ್ತು 2020–21 ಕ್ಕೆ ಹೋಲಿಸಿದಾಗ 37 ಶೇಕಡಾ ಇಳಿಕೆಯಾಗಿ (36 ಶೇಕಡಾ) ಗಾತ್ರದಲ್ಲಿ(23.77 ಲಕ್ಷ ಟನ್‌ಗಳು) 37 ಶೇಕಡಾ ಮೌಲ್ಯದಲ್ಲಿ ರೂ.5600 ಕೋಟಿಗಳಾಗಿವೆಯೆನ್ನಲಾಗಿದೆ. ಸೋಯಾಮೀಲ್ ರಫ್ತು ತೀವ್ರ ಇಳಿಕೆಯಾಗಿರುವುದು. ಹಿಂದಿನ ವರ್ಷ 15,64,833 ಟನ್ ಗಳಿಂದ ಈ ವರ್ಷ 3,72,740 ಟನ್‌ಗಳಿಗೆ ಇಳಿಕೆಯಾಗಿರುವುದು. ಕಂಟೈನರ್, ಹಡಗು ಲಭ್ಯತೆ ಸಾಕಷ್ಟಿಲ್ಲದಿರುವುದು ಹಾಗೂ ಭಾರತೀಯ ಸೋಯಾಮೀಲ್ ಹಾಗೂ ಅಮೇರಿಕಾ, ಅರ್ಜೆಂಟಿನಾ, ಬ್ರೆಜಿಲ್ ಸೋಯಾಮೀಲ್ ದರಗಳಲ್ಲಿ ಭಾರತದ ಸೋಯಾಮೀಲ್ ದರ ಗಣನೀಯ ಹೆಚ್ಚಳವಿರುವುದು ರಫ್ತು ಇಳಿಕೆಗೆ ಕಾರಣವೆನ್ನಲಾಗಿದೆ. ವಂಶವಾಹಿ ಅಪರಿವರ್ತಿತವಾದ ಸೋಯಾಮೀಲ್ ಎಣ್ಣೆ ಹಾಗೂ ಮೀಲ್ ಭಾರತದಲ್ಲಿ ಉತ್ಪಾದಿತವಾಗುತ್ತಿರುವುದರಿಂದ ಇದಕ್ಕೆ ಹೆಚ್ಚಿನ ಬೇಡಿಕೆ ದರವಿದೆ. ರೈತರು ಹೆಚ್ಚಿನ ದರ ನಿರೀಕ್ಷೆಯಿಂದ ಮಾರಾಟಮಾಡದೆ ಹಿಡಿದಿಟ್ಟುಕೊಂಡಿರುವುದು, ಸೋಯಾಮೀಲ್ ರಫ್ತು ಇಳಿಕೆ ಇವುಗಳಿಂದ ಸೋಯಾಬೀನ್ ಅರೆಯುವುವಿಕೆಯೂ ಕಡಿಮೆಯಾಗಿದೆಯೆನ್ನಲಾಗಿದೆ.

## ಈ ವರ್ಷದ ಸಕ್ಕರೆ ಉತ್ಪಾದನೆ 35 ಮಿಲಿಯನ್ ಟನ್‌ಗಳಿಗೇರುವ ಸಾಧ್ಯತೆ

ಈ ವರ್ಷ ದ ಭಾರತದ ಸಕ್ಕರೆ ಉತ್ಪಾದನೆ ಹಿಂದಿನ ವರ್ಷಕ್ಕಿಂತ 13 ಶೇಕಡಾ ಹೆಚ್ಚಳಗೊಂಡು 35 ಮಿಲಿಯನ್ ಟನ್ ಗಳಿಗೇರುವ ಸಾಧ್ಯತೆಯಿದೆಯೆನ್ನಲಾಗಿದೆ.